सत्यमेव जयते

ರಾಜೀವ್ ಚಂದ್ರಶೇಖರ್
ಸಂಸತ್ ಸದಸ್ಯರು

ಆಗಸ್ಟ್ 6, 2015

ಸನ್ಮಾನ್ಯ ಶ್ರೀ ಜಾರ್ಜ್ ಅವರೇ

ಆಗಸ್ಟ್ 3, 2015ರಂದು ಬೆಂಗಳೂರು ನಗರದ ಇಂದಿರಾನಗರದ ಖಾಸಗಿ ಶಾಲೆಯೊಂದರಲ್ಲಿ 3 ವರ್ಷದ ಮಗುವಿನ ಮೇಲೆ ನಡೆದ ಲೈಂಗಿಕ ದೌರ್ಜನ್ಯ ಪ್ರಕರಣದ ಕುರಿತಂತೆ ತಮಗೆ ಈ ಪತ್ರವನ್ನು ಬರೆಯುತ್ತಿದ್ದೇನೆ. ಮತ್ತು ಈ ಪ್ರಕರಣದಲ್ಲಿ ಆರೋಪಿಯಾಗಿರುವ ಭದ್ರತಾ ಸಿಂಬ್ಬಂದಿಯೋರ್ವನನ್ನು ಪೊಕ್ಸೊ ಕಾಯ್ದೆಯಡಿ ಬಂಧಿಸಲಾಗಿರುವುದು ನನ್ನ ಗಮನಕ್ಕೆ ಬಂದಿದೆ.

ಈ ಪ್ರಕರಣವೂ ಸೇರಿದಂತೆ, ಕಳೆದ ಒಂದು ವರ್ಷದಲ್ಲಿ, ವಿಶೇಷವಾಗಿ ಬೆಂಗಳೂರು ನಗರದಲ್ಲಿ ಶಾಲೆಗಳಲ್ಲಿ ಮಕ್ಕಳ ಮೇಲಿನ ದೌರ್ಜನ್ಯಪ್ರಕರಣಗಳು ವರದಿಯಾಗುತ್ತಲೇ ಇದೆ. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಗಳು ಒಂದು ರೀತಿಯಲ್ಲಿ ಮಕ್ಕಳ ಮೇಲೆ ನಡೆಸಲಾಗುವ ಉಗ್ರ ಭಯೋತ್ಪಾದಕ ಕೃತ್ಯವೇ ಆಗಿದೆ. ಅದರಲ್ಲೂ ಇಂತಹ ಅಮಾನವೀಯ ಪ್ರಕರಣಗಳು ಹೆಚ್ಚಾಗಿ ಬೆಂಗಳೂರಿನಲ್ಲಿ ನಡೆಯುತ್ತಿರುವುದು ಅತ್ಯಂತ ಕಳವಳಕಾರಿಯಾದ ಸಂಗತಿಯಾಗಿದೆ.

ನಾನು ಫೆಬ್ರವರಿ 20, 2014ರಂದು ತಮಗೆ ಬರೆದ ಪತ್ರದಲ್ಲಿ, ಮಕ್ಕಳ ಮೇಲೆ ನಡೆಯುತ್ತಿರುವ ಅಪರಾಧ ಪ್ರಕರಣಗಳನ್ನು ತಕ್ಷಣದಿಂದಲೇ ತಡೆಯಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಆಗ್ರಹಿಸಿದ್ದೆ (ಪ್ರತಿ ಲಗತ್ತಿಸಲಾಗಿದೆ). ಆದರೆ, ಸರ್ಕಾರ ಇಲ್ಲಿಯವರೆಗೂ ಹೆಚ್ಚಿನದ್ದೇನನ್ನೂ ಸಾಧಿಸಿಲ್ಲ. ಈಗಲಾದರೂ, ನಮ್ಮ ಮಕ್ಕಳ ಸುರಕ್ಷತೆ ಮತ್ತು ಸಂರಕ್ಷಣೆಯ ದೃಷ್ಟಿಯಿಂದ ಅಗತ್ಯ ಕ್ರಮಗಳನ್ನು ಜಾರಿಗೆ ತರಬೇಕೆಂದು ಈಮೂಲಕ ಒತ್ತಾಯಿಸುತ್ತಿದ್ದೇನೆ.

1. ರಾಜ್ಯ ಸರ್ಕಾರ ಕೂಡಲೇ ಎಲ್ಲ ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿ ನಿಯತವಾಗಿ ಸುರಕ್ಷತಾ ಪರಿಶೋಧನೆ (ಆಡಿಟ್) ನಡೆಸಬೇಕು. ಈ ಸುರಕ್ಷತಾ ಪರಿಶೋಧನೆಗಳ ವರದಿ ಸಾರ್ವಜನಿಕವಾಗಿ ಪೋಷಕರಿಗೆ ಲಭ್ಯವಿರಬೇಕು.

2. ಶಾಲಾ ಆಡಳಿತ ಮಂಡಳಿಗಳು ತಮ್ಮ ಸಿಬ್ಬಂದಿ ನೇಮಕ ಪ್ರಕ್ರಿಯೆಗಳಲ್ಲಿ ಕಟ್ಟುನಿಟ್ಟಾದ ಪರಿಶೀಲನಾ ವ್ಯವಸ್ಥೆಯನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕು. ಆಮೂಲಕ, ಆಕ್ಷೇಪಗಳಿಗೆ ಎಡೆಯಿಲ್ಲದಂತಹ ಒಂದು ಸುಭದ್ರ ವ್ಯವಸ್ಥೆಯನ್ನು ರೂಪಿಸಬೇಕು.

3. ಕರ್ನಾಟಕ ಸರ್ಕಾರ ಮಕ್ಕಳ ಲೈಂಗಿಕ ಅಪರಾಧಿಗಳ ರಿಜಿಸ್ಟ್ರಿಯನ್ನು ನಿರ್ವಹಿಸುವುದರ ಜೊತೆಗೆ ಕೇಂದ್ರ ಸರ್ಕಾರದ ಮಾಹಿತಿಗಳೊಂದಿಗೆ ಸಮೀಕರಿಸಬೇಕು. ವಿವಿಧ ಪೊಲೀಸ್ ಠಾಣೆಗಳ ನಡುವೆ ಮಾಹಿತಿ ವಿನಿಮಯದಲ್ಲಿ ಇದು ಅತ್ಯಂತ ಮಹತ್ವದ್ದಾಗಿದೆ.



11ನೇ ಮಹಡಿ, ದೊಡ್ಡ ಗೋಪುರ, ಸರ್ ಎಂ. ವಿಶ್ವೇಶ್ವರಯ್ಯ ಕೇಂದ್ರ, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು – 560 001.
ದೂರವಾಣಿ : 91-80-22863600, ದೂರವಾಣಿ / ಫ್ಯಾಕ್ಸ್ : 91-80-22863680
ಅಂತರ್ಜಾಲ ವಿಳಾಸ : rajeev.c@nic.in
www.rajeev.in / ham:VU2RCL

4. ರಾಜ್ಯ ಸಚಿವ ಸಂಪುಟ ಅನುಮೋದಿಸಿದ 'ಕರ್ನಾಟಕದಲ್ಲಿ ಶಾಲಾ ಮಕ್ಕಳ ಸುರಕ್ಷಿತ ಸಂರಕ್ಷಣಾ ನೀತಿ'ಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು ಮತ್ತು ಅದರನ್ವಯ ಮಕ್ಕಳ ಸಂರಕ್ಷಣಾ ಸಮಿತಿ ಮತ್ತು ಮಕ್ಕಳ ಸಂರಕ್ಷಣಾ ಅಧಿಕಾರಿಗಳನ್ನು ಪ್ರತಿಯೊಂದು ಶಾಲೆಯಲ್ಲಿ ನೇಮಕವಾಗಬೇಕು.

5. ವಿಶೇಷ ಸರ್ಕಾರಿ ಅಭಿಯೋಜಕರ ಮತ್ತು ತ್ವರಿತ ಪೊಕ್ಸೊ ನ್ಯಾಯಾಲಯಗಳ ಮೂಲಕ ಶೀಘ್ರ ಕಾನೂನು ಕ್ರಮ.

ನನ್ನ ಪುನರಾವರ್ತಿತ ಕೋರಿಕೆಗಳು ಮತ್ತು ಪೋಷಕರ ಹಾಗು ನಗರದಾದ್ಯಂತದ ಸಂಘಟನೆಗಳ ಆಗ್ರಹಗಳ ನಡುವೆಯೂ ಸರ್ಕಾರ ಯಾವ ಗಮನಾರ್ಹ ಕ್ರಮವನ್ನೂ ತೆಗೆದುಕೊಂಡಿಲ್ಲದಿರುವುದು ಈಗ ಸಂಭವಿಸಿರುವ ಪ್ರಕರಣದಿಂದ ಮತ್ತೊಮ್ಮೆ ಸಾಬೀತಾಗಿದೆ. ಇದು ಮಕ್ಕಳ ಸುರಕ್ಷತಾ ವಿಷಯದಲ್ಲಿ ಸರ್ಕಾರದ ಉದಾಸೀನ ಮತ್ತು ನಿರ್ಲಕ್ಷ್ಯ ಧೋರಣೆಯನ್ನು ರುಜುವಾತುಪಡಿಸಿದೆ.

ಸರ್ಕಾರ ಮತ್ತು ವಿಶೇಷವಾಗಿ ಪೊಲೀಸ್ ಇಲಾಖೆ, ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳು ಮತ್ತು ಶಿಶುಕಾಮಿಗಳನ್ನು ಸಹಿಸಿಕೊಳ್ಳಲೇ ಕೂಡದು. ಇಂತಹ ಅಮಾನವೀಯ ಪ್ರಕರಣಗಳು ಮತ್ತೆ ಸಂಭವಿಸದಂತೆ ತಡೆಯಲು ಕಠಿಣ ಕ್ರಮಗಳನ್ನು ಜಾರಿಗೆ ತರುವುದು ಸರ್ಕಾರದ ನೈತಿಕ ಹೊಣೆಗಾರಿಕೆಯ ಜೊತೆಗೆ ಅದರ ಮುಖ್ಯಸ್ಥರಾಗಿ ತಮ್ಮ ಕರ್ತವ್ಯವೂ ಹೌದು.

ಇಂತಿ ತಮ್ಮ ವಿಶ್ವಾಸಿ

**ರಾಜೀವ್ ಚಂದ್ರಶೇಖರ್**

**ಶ್ರೀ ಕೆ.ಜೆ.ಜಾರ್ಜ್**
ಗೃಹ ಸಚಿವರು,
ಕರ್ನಾಟಕ ಸರ್ಕಾರ

ಪ್ರತಿಯನ್ನು:- ಶ್ರೀಮತಿ ಉಮಾಶ್ರೀ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು, ಕರ್ನಾಟಕ ಸರ್ಕಾರ